:–: ಪತ್ರಿಕಾ ಪ್ರಕಟಣೆ :–:

ದಿನಾಂಕ : 07–01–2023

# ಪತ್ರಿಕಾ ಪ್ರಕಟಣೆ

## ಮಾರಣಾಂತಿಕ ಅಪಘಾತ ಮಾಡಿದ ಆರೋಪಿಗೆ 1 ವರ್ಷ 6 ತಿಂಗಳು ಶಿಕ್ಷೆ ಮತ್ತು 3 ಸಾವಿರ ದಂಡ ವಿಧಿಸಿದ ಶಿರಾ ಹೆಚ್ಚುವರಿ ಮತ್ತು ಸಿಜೆ(ಜೆಡಿ) ಜೆ.ಎಂ.ಎಫ್.ಸಿ. ನ್ಯಾಯಾಲಯ

=======

ದಿನಾಂಕ 27–01–2022 ರಂದು ಬೆಳಿಗ್ಗೆ ಸುಮಾರು 10–15 ಗಂಟೆ ಸಮಯದಲ್ಲಿ ಶಿರಾ ತಾಲ್ಲೂಕು ಸಿದ್ದನಹಳ್ಳಿ ಗ್ರಾಮದ ವಾಸಿ ಶ್ರೀಧರ್ ಎಂಬಾತನು ಉಪನ್ಯಾಸಕರಾದ ಶ್ರೀನಿವಾಸ್ ರವರನ್ನು KA-51-EP-4407 ನೇ ಮೋಟಾರ್ ಸೈಕಲ್ ಹಿಂಬದಿಯಲ್ಲಿ ಕೂರಿಸಿಕೊಂಡು ಪಟ್ಟನಾಯಕನಹಳ್ಳಿ ಕ್ರಾಸಿಂಗ್ ನಿಂದ ಪಟ್ಟನಾಯಕನಹಳ್ಳಿ ಕಡೆಗೆ ಹೋಗುತ್ತಿದ್ದಾಗ ಕೆಎ–06–ಪಿ–9239 ನೇ ನಂಬರಿನ ಕಾರನ್ನು ಅದರ ಚಾಲಕ ಓಂಕಾರೇಶ್ವರ ಎಂಬಾತನು ಶಿರಾ ಕಡೆಯಿಂದ ಪಟ್ಟನಾಯಕನಹಳ್ಳಿ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಶ್ರೀಧರವರು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಮೋಟಾರ್ ಸೈಕಲ್‌ಗೆ ಹಿಂದಿನಿಂದ ಡಿಕ್ಕಿ ಹೊಡೆಸಿ ಅಪಘಾತಪಡಿಸಿದ ಪರಿಣಾಮ ಶ್ರೀಧರ್ ಮೃತಪಟ್ಟು ಹಿಂಬದಿಯ ಸವಾರ ಶ್ರೀನಿವಾಸ್ ರವರಿಗೆ ಪೆಟ್ಟುಗಳಾಗಿದ್ದು ಈ ಬಗ್ಗೆ ಪಟ್ಟನಾಯಕನಹಳ್ಳಿ ಪೊಲೀಸ್ ಠಾಣಾ ಮೊ.ನಂ. 06/2022 ಕಲಂ 279,304(ಎ) ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತೆ.

ಈ ಪ್ರಕರಣ ತನಿಖೆ ಕೈಗೊಂಡ ಸಿಪಿಐ ರವಿಕುಮಾರ್ ಸಿ ರವರು ಆರೋಪಿ ಓಂಕಾರೇಶ್ವರ ಬಿನ್ ಗುಜ್ಜಾರಪ್ಪ, ಗುಂಡಪ್ಪಚಿಕ್ಕೇನಹಳ್ಳಿ ಶಿರಾ ತಾಲ್ಲೂಕು ಈತನನ್ನು ದಸ್ತಗಿರಿ ಮಾಡಿ ಈ ಪ್ರಕರಣದಲ್ಲಿ ತನಿಖೆಕೈಗೊಂಡು ಸ್ಥಳ ಪರಿಶೀಲನೆ ಮತ್ತು ಸಾಕ್ಷಿದಾರರುಗಳನ್ನು ವಿಚಾರಣೆ ನಡೆಸಿ ಸಾಕ್ಷಾಧಾರಗಳನ್ನು ಸಂಗ್ರಹಿಸಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿಕೊಂಡಿರುತ್ತಾರೆ. ಪ್ರಕರಣವನ್ನು ಘನ ನ್ಯಾಯಾಲಯವು ಸಿಸಿ.ನಂ.1781/22 ರಲ್ಲಿ ನೊಂದಾಯಿಸಿ ವಿಚಾರಣೆ ಕೈಗೊಂಡು ಆರೋಪಿಯ ವಿರುದ್ದ ಆರೋಪ ಸಾಬೀತಾದ ಹಿನ್ನಲೆಯಲ್ಲಿ ಮಾನ್ಯ ನ್ಯಾಯಾಧೀಶರಾದ ಶ್ರೀಮತಿ ಎಂ.ವಿ. ಲಕ್ಷ್ಮಿ ರವರು ಆರೋಪಿಗೆ 1 ವರ್ಷ 6 ತಿಂಗಳು ಸೆರವಾಸ ಮತ್ತು 3000 ರೂ ದಂಡ ವಿಧಿಸಿರುತ್ತಾರೆ.

ಪ್ರಕರಣದ ತನಿಖಾಧಿಕಾರಿಗಳಾದ ರವಿಕುಮಾರ್ ಸಿ ಸಿ.ಪಿ.ಐ. ಶಿರಾ ಗ್ರಾಮಾಂತರ ವೃತ್ತ ರವರು ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ. ಶ್ರೀಮತಿ ಚಂದ್ರಕಲಾ. ಸಹಾಯಕ ಸರ್ಕಾರಿ ಅಭಿಯೋಜಕರು, ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದರು.

ರವಿಕುಮಾರ್ ಸಿ ಸಿಪಿಐ ಶಿರಾ ಗ್ರಾಮಾಂತರ ವೃತ್ತ, ತನಿಖಾ ಸಹಾಯಕ ಸಿ.ಪಿ.ಕಿರಣ್‌ಕುಮಾರ್, ನ್ಯಾಯಾಲಯದ ಕರ್ತವ್ಯದ ಸಿಬ್ಬಂದಿ ಸೀತರಾಮ ರವರನ್ನು ಮಾನ್ಯ ಪೊಲೀಸ್ ಅಧೀಕ್ಷಕರವರು ಮನಸಾರೆ ಶ್ಲಾಘನೆ ಮಾಡಿರುತ್ತಾರೆ.

ಜಿಲ್ಲಾ ಪೊಲೀಸ್ ಕಛೇರಿ,
ತುಮಕೂರು ಜಿಲ್ಲೆ.